# ಬಂದೂಕಿನ ನಳಿಕೆಯಲ್ಲಿ ಸಿನಿಮಾ ಗೂಡು

■ ವಿಶಾಖ ಎನ್.

ಭಾರತೀಯ ಚಿತ್ರಗಳಲ್ಲಿ ಶಸ್ತ್ರಾಸ್ತ್ರಗಳ ಬಳಕೆ ಮೊದಲಿನಿಂದ ಗಮನ ಸೆಳೆಯುತ್ತಲೇ ಬಂದಿದೆ. 'ವಿಜಯ್‌ಪಥ್' ಹಿಂದಿ ಚಿತ್ರದಲ್ಲಿ ಅಜಯ್ ದೇವಗನ್ ಹಿಡಿದಿದ್ದ ಶಾರ್ಕ್ ತುದಿಯ ವಿಲಕ್ಷಣ ರೈಫಲ್ ಆಗಲಿ, 'ಶಿವ' ತೆಲುಗು ಚಿತ್ರದಲ್ಲಿ ನಾಗಾರ್ಜುನ ಕೈಗೆ ಸುತ್ತಿಕೊಳ್ಳುವ ಸೈಕಲ್ ಚೈನ್ ಆಗಲಿ, 'ಜೋಗಿ' ಕನ್ನಡ ಚಿತ್ರದಲ್ಲಿ ಶಿವರಾಜ್‌ಕುಮಾರ್ ಹಿಡಿಯುವ ಲಾಂಗ್ ಆಗಲಿ ಇಂತಹ ಕೆಲವು ನಮೂನೆಗಳು.

ಈಗಲೂ ಶಸ್ತ್ರಾಸ್ತ್ರಗಳ ಇಂತಹ ಪ್ರೀತಿ ಮುಂದುವರಿದಿದೆ. 'ಕೆಜಿಎಫ್ 2'ನ ಕಲಾಷ್ನಿಕೋವ್, ದೊಡ್ಡಮ್ಮ ನೋಡಿ ಉಘೇ ಎಂದವರಿದ್ದಾರೆ. 'ವಿಕ್ರಂ' ಸಿನಿಮಾದ ಕೊನೆಯಲ್ಲಿ ಕಮಲ ಹಾಸನ್ ನಡು ಮೈದಾನಕ್ಕೆ ಎಳೆದು ತರುವ ಫಿರಂಗಿಯಂತಹ ದೊಡ್ಡ ಹಳೆಯ ಶಸ್ತ್ರಾಸ್ತ್ರ ಉಗುಳುವ ಗುಂಡುಗಳ ತೀವ್ರತೆ ಕಂಡು 'ಅಬ್ಬಾ' ಎಂದವರೂ ಇದ್ದಾರೆ. ಶಾರುಖ್ ಖಾನ್ ನಟಿಸುತ್ತಿರುವ 'ಜವಾನ್' ಹಿಂದಿ ಸಿನಿಮಾದ ಮೊದಲ ಪೋಸ್ಟರ್ ಬಿಡುಗಡೆಯಾಯಿತು. ರಕ್ತಸಿಕ್ತ ಮುಖಕ್ಕೆ ಬಲಗಣ್ಣನ್ನೂ ಬಿಡದಂತೆ ಬ್ಯಾಂಡೇಜ್ ಸುತ್ತಿಕೊಳ್ಳುವ ಶಾರುಖ್, ಕಾಲಿಗೆ ಬಂದೂಕೊಂದು ಒರಗಿಕೊಂಡಿರುತ್ತದೆ.

ಆಮೇಲೆ ಅದರ ಟೀಸರ್ ಬಿಡುಗಡೆಯಾಯಿತು. ಶಾರುಖ್, ರ್‍ಯಾಕ್ ಮೇಲಿನ ಬ್ಯಾಂಡೇಜ್ ಸುರುಳಿಯನ್ನು ಬಿಚ್ಚಿ ಮುಖಕ್ಕೆ ಸುತ್ತಿಕೊಳ್ಳುತ್ತಾರೆ; ಎಡಗಣ್ಣು ಮಾತ್ರ ಗುರಿ ಇಡಲು ಸಿದ್ಧವಿರುವ ರೀತಿ ಕಾಣುವಂತೆ. ಆಮೇಲೆ ಮೇಜಿನ ಮೇಲಿನ ಒಂದು ಬಟ್ಟೆಯನ್ನು ತೆಗೆಯುತ್ತಾರೆ. ಅದರಡಿಯಲ್ಲೆಲ್ಲ ತರಹೇವಾರಿ ಬಂದೂಕುಗಳು. ಅದರಲ್ಲಿ ಒಂದನ್ನು ಎತ್ತಿಕೊಂಡು ಕುರ್ಚಿ ಮೇಲೆ ಕೂರುತ್ತಾರೆ. 'ಸಿದ್ಧವಾ' ಎಂಬೊಂದು ದನಿ ವಾಕಿಟಾಕಿಯಲ್ಲಿ ಕೇಳುತ್ತದೆ. 'ರೆಡಿ' ಎಂದು ತಮ್ಮದೇ ಗುಟುರು ಹಾಕುವ ಶೈಲಿಯಲ್ಲಿ ಶಾರುಖ್ ಹೇಳುತ್ತಾರೆ.

ಹಾಲಿವುಡ್ ಚಿತ್ರಗಳಲ್ಲಿ ತರಹೇವಾರಿ ಶಸ್ತ್ರಾಸ್ತ್ರಗಳನ್ನು ನೋಡುತ್ತಿರುವ ಹೈಕಳಿಗೆ ಪ್ರಾದೇಶಿಕ ಸಿನಿಮಾಗಳಲ್ಲಿಯೂ ಅವುಗಳ ರುಚಿ ಉಣಿಸಿದರೆ ಹಿಡಿದಿಟ್ಟುಕೊಳ್ಳಬಹುದು ಎನ್ನುವ ಉಮೇದಿ ಇಂತಹ ಧೋರಣೆಯಲ್ಲಿ ಇರುವುದಂತೂ ಸ್ಪಷ್ಟ. ■





# ಹಕ್ಕಿ ಭಯಸ್ಥೆ ಕಿಯಾರಾ

'ಭೂಲ್ ಭುಲಯ್ಯಾ 2' ಹಿಂದಿ ಸಿನಿಮಾ ಯಶಸ್ಸಿನ ಅಲೆ ಮೇಲೆ ತೇಲುತ್ತಿರುವ ನಟಿ ಕಿಯಾರಾ ಅಡ್ವಾಣಿ ತಮ್ಮ ವಿಚಿತ್ರ ಭಯವೊಂದನ್ನು ಇತ್ತೀಚೆಗೆ ಹಂಚಿಕೊಂಡರು. ಅವರಿಗೆ ಹಕ್ಕಿ ಎಂದರೆ ಇನ್ನಿಲ್ಲದ ಭಯ. ಹಕ್ಕಿಗಿಲಕ ಕೇಳಿದರೆ ಯಾರಿಗೆ ತಾನೆ ಹಿತವೆನಿಸೊಲ್ಲ? ಆದರೆ ಕಿಯಾರಾ ಅಂಥವರ ಪೈಕಿ ಅಲ್ಲ. ಅವರಿಗೆ 'ಬರ್ಡ್ ಫೋಬಿಯಾ' ದೀರ್ಘ ಕಾಲದಿಂದ ಕಾಡುತ್ತಿದೆಯಂತೆ. ಹಕ್ಕಿಗಳು ಹೇಗೆ ಕಾಡಿದರೂ ಅವರಿಗೆ ಅಳು ಬರುತ್ತದೆ. ಅದರಲ್ಲೂ ಅವರ ಆಸುಪಾಸಿನಲ್ಲಿ ಹಕ್ಕಿಗಳೇನಾದರೂ ಸುಳಿದಾಡಿದರೆ ಹೊಟ್ಟೆ ತೊಳಸಿದ ಹಾಗಾಗುವುದಂತೆ.

'ಭೂಲ್ ಭುಲಯ್ಯಾ 2' ಚಿತ್ರದ ನಿರ್ದೇಶಕ ಅನೀಜ್ ಬಾಜ್ಮಿ ಈ ವಿಷಯ ಕೇಳಿ, 'ನನಗೆ ಇದು ಮೊದಲೇ ಗೊತ್ತಿದ್ದಿದ್ದರೆ ಕಿಯಾರಾಳನ್ನು ಗೋಳುಹೊಯ್ದುಕೊಳ್ಳಬಹುದಿತ್ತು' ಎಂದು ಚಟಾಕಿ ಹಾರಿಸಿದರು.

'ಡೆಲ್ಲಿ 6' ಹಿಂದಿ ಚಿತ್ರದಲ್ಲಿ ಸೋನಂ ಕಪೂರ್ 'ಮಸಕ್ಕಲಿ' ಎಂಬ ಹಾಡಿನಲ್ಲಿ ಪಾರಿವಾಳವನ್ನು ಭುಜದ ಮೇಲೆ ಕೂರಿಸಿಕೊಂಡು ನೃತ್ಯ ಮಾಡುವ ಸನ್ನಿವೇಶವಿದೆ. 'ನನಗೆ ಅದನ್ನು ನೋಡಿದಾಗೆಲ್ಲ ಯಪ್ಪಾ ಅನಿಸುತ್ತದೆ. ನನಗೆ ಅಂತಹ ದೃಶ್ಯದಲ್ಲಿ ಅಭಿನಯಿಸಲು ಆಗುವುದೇ ಇಲ್ಲ. ಒಂದು ವೇಳೆ ನಿರ್ದೇಶಕರು ಒತ್ತಾಯಿಸಿದರೆ ಅಂತಹ ದೃಶ್ಯ ಇರುವ ಸಿನಿಮಾದಿಂದಲೇ ನಾನು ಹೊರಬರುವೆನಷ್ಟೆ' ಎಂದು ಪ್ರತಿಕ್ರಿಯಿಸಿದರು.

'ಜುಗ್ ಜುಗ್ ಜಿಯೊ' ಹಿಂದಿ ಸಿನಿಮಾದಲ್ಲಿ ಕಿಯಾರಾ ಅಭಿನಯಿಸಿದ್ದು, ಅದನ್ನು ಎದುರುನೋಡುತ್ತಿದ್ದಾರೆ. ವರುಣ್ ಧವನ್, ಅನಿಲ್ ಕಪೂರ್ ಕೂಡ ಆ ಚಿತ್ರದ ತಾರಾಗಣದಲ್ಲಿ ಇದ್ದಾರೆ. ಕರಣ್ ಜೋಹರ್ ಅವರ ಧರ್ಮ ಪ್ರೊಡಕ್ಷನ್ಸ್ ಸಂಸ್ಥೆ ನಿರ್ಮಿಸಿರುವ ಈ ಚಿತ್ರವನ್ನು ರಾಜ್ ಮೆಹ್ತಾ ನಿರ್ದೇಶಿಸಿದ್ದಾರೆ.

ರಾಮ್ ಚರಣ್ ಜತೆ 'ಆರ್‌ಸಿ 15' ಎಂಬ ತೆಲುಗು ಚಿತ್ರ (ಕಾರ್ತಿಕ್ ಸುಬ್ಬರಾಜ್ ಕಥೆ ಇರುವ ಈ ಸಿನಿಮಾವನ್ನು ಶಂಕರ್ ಷಣ್ಮುಗಂ ನಿರ್ದೇಶಿಸಲಿದ್ದಾರೆ) ಹಾಗೂ ವಿಕ್ಕಿ ಕೌಶಲ್, ಭೂಮಿ ಪಡ್ನೇಕರ್ ಜತೆಗಿನ 'ಗೋವಿಂದ ನಾಮ್ ಮೇರಾ' ಹಿಂದಿ ಸಿನಿಮಾಗಳಲ್ಲೂ ಕಿಯಾರಾ ನಟಿಸುತ್ತಿದ್ದಾರೆ.

'ಏನೆಲ್ಲ ಸವಾಲುಗಳೊಡ್ಡುವ ಪಾತ್ರಗಳನ್ನು ನಿಭಾಯಿಸುವ ನನಗೆ ಹಕ್ಕಿ ಎಂದರೆ ಇರುವ ಭಯ ಕೆಲವರಿಗೆ ತಮಾಷೆ ಎನಿಸುತ್ತದೆ. ಆದರದು ಸತ್ಯ. ಆ ಸಂಕಟ ನನ್ನೊಬ್ಬಳಿಗೇ ಗೊತ್ತು' ಎಂದು ಕಿಯಾರಾ ನಗುನಗುತ್ತಲೇ ಹೇಳಿಕೊಳ್ಳುತ್ತಾರೆ. ■